## ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1192

2] ಮಾನ್ಯ ಸದಸ್ಯರ ಹೆಸರು : ಡಾ॥ ಯತೀಂದ್ರ.ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು)

3] ಉತ್ತರಿಸುವ ದಿನಾಂಕ : 19/12/2024

4] ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸುಳ್ಳು ಸುದ್ದಿ ಪ್ರಚಾರ ಮಾಡುವುದು ಒಂದು ಸಾಮಾಜಿಕ ಪಿಡುಗಾಗಿದ್ದು, ಈ ಸುಳ್ಳು ಸುದ್ದಿಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು) | ಸುಳ್ಳು ಸುದ್ದಿಗಳನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ:<br>• ಸುಳ್ಳು ಸುದ್ದಿ ಹರಡಿ ಸಾಮಾಜಿಕ ಜಾಲತಾಣಗಳ ಮೂಲಕ ಸಮಾಜದಲ್ಲಿ ಸಾಮರಸ್ಯವನ್ನು ಹಾಳು ಮಾಡುವವರ ಮೇಲೆ 2021 ರಿಂದ 2024ರವರೆಗೆ ಒಟ್ಟು 247 ಪ್ರಕರಣಗಳು ದಾಖಲಾಗಿರುತ್ತವೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.<br>• ಜಿಲ್ಲಾ ಮಟ್ಟದಲ್ಲಿ ಮತ್ತು ಠಾಣಾ ಮಟ್ಟಗಳಲ್ಲಿ ಸೋಶಿಯಲ್ ಮೀಡಿಯಾ ಮಾನಿಟರಿಂಗ್ ಸೆಲ್‌ಅನ್ನು ತೆರೆದಿದ್ದು, ಸಾಮಾಜಿಕ ಜಾಲತಾಣಗಳ ಮೇಲೆ ನಿಗಾವಹಿಸಲಾಗುತ್ತಿದೆ.<br>• ಗುಪ್ತ ಮಾಹಿತಿ ಸಿಬ್ಬಂದಿ ಹಾಗೂ ಬೀಟ್ ಸಿಬ್ಬಂದಿಯವರು ಸಹ ಈ ಬಗ್ಗೆ ಗಮನಹರಿಸಿ ಮಾಹಿತಿಯನ್ನು ಸಂಗ್ರಹಿಸುತ್ತಿರುತ್ತಾರೆ.<br>• ಜಿಲ್ಲೆಯ ಎಲ್ಲಾ ಪೊಲೀಸ್ ಅಧಿಕಾರಿಗಳು ಸುಳ್ಳು ಸುದ್ದಿ ಹರಡುವವರ ಬಗ್ಗೆ ನಿಗಾವಹಿಸಿ ಮಾಹಿತಿಯನ್ನು ಸಂಗ್ರಹಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತಿದೆ.<br>• ಎಲ್ಲಾ ಪೊಲೀಸ್ ಠಾಣಾ ಮಟ್ಟದಲ್ಲಿ ಸಾಮಾಜಿಕ ಜಾಲತಾಣ ನಿಗಾವಣೆ (SMMC) ಘಟಕವನ್ನು ಸ್ಥಾಪಿಸಿ ಇದರ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುವಂತಹ ಸುಳ್ಳು ಸುದ್ದಿ ಪ್ರಚಾರ ಮಾಡುವವರ ಮೇಲೆ ನಿಗಾವಹಿಸಲಾಗುತ್ತಿರುತ್ತದೆ.<br>• ಸಾಮಾಜಿಕ ಜಾಲತಾಣಗಳಲ್ಲಿ/ಯೂಟ್ಯೂಬ್ ಚಾನೆಲ್‌ಗಳಲ್ಲಿ ಹರದಾಡುವ ಪ್ರಚೋದನಕಾರಿ ಸಂದೇಶಗಳ/ಸುಳ್ಳು ಸುದ್ದಿಗಳ/ದ್ವೇಷ ಭಾಷಣಗಳ ಮೇಲೆ ನಿರಂತರ ನಿಗಾವಹಿಸಿ, ಯಾವುದಾದರು ಅಹಿತಕರ ಸಂದೇಶಗಳು/ ಸುಳ್ಳು ಸುದ್ದಿಗಳು ಕಂಡು ಬಂದಲ್ಲಿ ಅಂತಹವರ ಮೇಲೆ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ. |

| | | |
|---|---|---|
| | | • ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡುವವರ ವಿರುದ್ಧ ಹಾಗೂ ಸುಳ್ಳು ಸುದ್ದಿಗಳನ್ನು ತಡೆಗಟ್ಟಲು ಸಾಮಾಜಿಕ ಜಾಲತಾಣ ಘಟಕದ ವತಿಯಿಂದ ಕೆಲವು ನಕಲಿ ಖಾತೆ ಸೃಷ್ಟಿಸಲಾಗಿದ್ದು, ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡುವ ಖಾತೆಗಳ ಮೇಲೆ ನಿಗಾವಹಿಸಲಾಗಿರುತ್ತದೆ.<br>• ಪ್ರತಿ ಪೊಲೀಸ್ ಠಾಣಾ ವ್ಯಾಪ್ತಿಯ ಎಲ್ಲಾ ಬಡಾವಣೆಗಳಲ್ಲಿ ಸಾರ್ವಜನಿಕರು ಹಾಗೂ ಸಂಬಂಧಪಟ್ಟ ಬೀಟ್ ಪೊಲೀಸ್‌ರವರನ್ನೊಳಗೊಂಡ ವಾಟ್ಸಪ್ ಗ್ರೂಪ್ ರಚಿಸಲಾಗಿದ್ದು, ನಿರಂತರವಾಗಿ ಸುಳ್ಳು ಸುದ್ದಿಗಳನ್ನು ಪ್ರಚಾರ ಮಾಡುವವರ ಮಾಹಿತಿ ಕಲೆ ಹಾಕಲಾಗುತ್ತಿದೆ. |
| ಆ) | ಸುಳ್ಳು ಸುದ್ದಿ ತಡೆಗಟ್ಟಲು ಪ್ರತ್ಯೇಕ ವಿಭಾಗ ಇದೆಯೇ? ಇಲ್ಲದಿದ್ದಲ್ಲಿ ಸುಳ್ಳು ಸುದ್ದಿ ಪತ್ತೆ ವಿಭಾಗವನ್ನು ಹೊಸದಾಗಿ ಸೃಷ್ಟಿಸುವ ಉದ್ದೇಶ ಇದೆಯೇ? (ವಿವರ ಒದಗಿಸುವುದು) | ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ/103/ಪಿಓಪಿ/2023, ದಿನಾಂಕ: 09.01.2024ರನ್ವಯ ಸಿ.ಐ.ಡಿ. ಘಟಕದಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ಮಾದಕ ವಸ್ತು ಮತ್ತು ಸೈಬರ್ ಅಪರಾಧಗಳು ರವರ ಅಧೀನದ ಡಿಐಜಿಪಿ, ಮಾದಕ ದ್ರವ್ಯ ಮತ್ತು ಸೈಬರ್ ಅಪರಾಧಗಳು ರವರ ಅಧೀನದಲ್ಲಿ ಸುಳ್ಳು ಸುದ್ದಿ ತಡೆಗಟ್ಟಲು ನೈಜಾಂಶ ತನಿಖಾ ಕೋಶ (Fact Check Cell) ಅನ್ನು ಸ್ಥಾಪಿಸಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 45 ಪಿಓಪಿ 2024, ದಿನಾಂಕ: 14/03/2024ರಲ್ಲಿ ತಪ್ಪು ಮಾಹಿತಿ ಪ್ರಯತ್ನಗಳು ಮತ್ತು ಸಮಾಜ ವಿರೋಧಿ ವಿಷಯ ತಡೆಗಟ್ಟುವ ಸಲುವಾಗಿ ಪ್ರಕರಣಗಳ ಗುರುತಿಸುವಿಕೆ ಮತ್ತು ಸಮನ್ವಯದ ಸಲುವಾಗಿ ಐ.ಟಿ.ಬಿ.ಟಿ. ಇಲಾಖೆಯ ಸಹಯೋಗದಲ್ಲಿ Multi-Departmental Co-ordination Committee (MDCC) ಸಮಿತಿಯನ್ನು ರಚಿಸಿ ಆದೇಶಿಲಾಗಿದೆ.<br>ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 45 ಪಿಓಪಿ 2024, ದಿನಾಂಕ: 26/08/2024ರಲ್ಲಿ ತಪ್ಪು ಮಾಹಿತಿ ಮತ್ತು ಸೈಬರ್ ಅಪರಾಧಗಳ ತಡೆಗಟ್ಟುವಿಕೆ ಮತ್ತು ನಿರ್ವಹಣೆಯ ಮೇಲುಸ್ತುವಾರಿ ಮಾಡಲು ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ವಿಶೇಷ ಅಧಿಕಾರಯುಕ್ತ ಸಮಿತಿಯನ್ನು (Special Empowered Committee) ರಚಿಸಿ, ಆದೇಶಿಸಲಾಗಿದೆ. |

**ಸಂಖ್ಯೆ: ಹೆಚ್‌ಡಿ 163 ಪಿಓಪಿ 2024**

(ಡಾ|| ಜಿ.ಪರಮೇಶ್ವರ)
ಗೃಹ ಸಚಿವರು.

## ಅನುಬಂಧ

| ಕ್ರ.ಸಂ | ಘಟಕ | ದಾಖಲಾದ ಪ್ರಕರಣಗಳ ಸಂಖ್ಯೆ |
|---|---|---|
| 1. | ಬೆಂಗಳೂರು ನಗರ | 99 |
| 2. | ಮೈಸೂರು ನಗರ | 02 |
| 3. | ಮಂಗಳೂರು ನಗರ | 06 |
| 4. | ಬೆಳಗಾವಿ ನಗರ | 02 |
| 5. | ಕಲಬುರಗಿ ನಗರ | 01 |
| 6. | ತುಮಕೂರು ಜಿಲ್ಲೆ | 09 |
| 7. | ಕೋಲಾರ ಜಿಲ್ಲೆ | 02 |
| 8. | ರಾಮನಗರ ಜಿಲ್ಲೆ | 03 |
| 9. | ಚಿಕ್ಕಬಳ್ಳಾಪುರ ಜಿಲ್ಲೆ | 03 |
| 10. | ಮೈಸೂರು ಜಿಲ್ಲೆ | 01 |
| 11. | ಮಂಡ್ಯ ಜಿಲ್ಲೆ | 03 |
| 12. | ಹಾಸನ ಜಿಲ್ಲೆ | 02 |
| 13. | ಕೊಡಗು ಜಿಲ್ಲೆ | 14 |
| 14. | ಚಾಮರಾಜನಗರ ಜಿಲ್ಲೆ | 02 |
| 15. | ಬೆಳಗಾವಿ ಜಿಲ್ಲೆ | 03 |
| 16. | ವಿಜಯಪುರ ಜಿಲ್ಲೆ | 02 |
| 17. | ಚಿತ್ರದುರ್ಗ ಜಿಲ್ಲೆ | 03 |
| 18. | ಹಾವೇರಿ ಜಿಲ್ಲೆ | 01 |
| 19. | ಶಿವಮೊಗ್ಗ ಜಿಲ್ಲೆ | 10 |
| 20. | ದಾವಣಗೆರೆ ಜಿಲ್ಲೆ | 02 |
| 21. | ದಕ್ಷಿಣ ಕನ್ನಡ ಜಿಲ್ಲೆ | 07 |
| 22. | ಉತ್ತರ ಕನ್ನಡ ಜಿಲ್ಲೆ | 45 |
| 23. | ಚಿಕ್ಕಮಗಳೂರು ಜಿಲ್ಲೆ | 07 |
| 24. | ಉಡುಪಿ ಜಿಲ್ಲೆ | 05 |
| 25. | ಕಲಬುರಗಿ ಜಿಲ್ಲೆ | 02 |
| 26. | ಬೀದರ್ ಜಿಲ್ಲೆ | 01 |
| 27. | ಕೊಪ್ಪಳ ಜಿಲ್ಲೆ | 01 |
| 28. | ಯಾದಗಿರಿ ಜಿಲ್ಲೆ | 04 |
| 29. | ವಿಜಯನಗರ ಜಿಲ್ಲೆ | 05 |
| ಒಟ್ಟು | | **247** |